ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಸವರಾಜ ಪಾಟೀಲ.--ನನ್ನದು ಉಪ ಪ್ರಶ್ನೆಯೇನೂ ಇಲ್ಲ.

ಗುಲ್ಬರ್ಗಾ ಜಿಲ್ಲೆಯಲ್ಲಿರುವ ವಿದ್ಯಾರ್ಥಿನಿಲಯಗಳ ಕುರಿತು.

೩೮೨. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಈ ಕೆಳ ಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಸಮಾಜ ಕಲ್ಯಾಣ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ನಡೆಸಲಾಗುತ್ತಿರುವ ವಿದ್ಯಾರ್ಥಿನಿಲಯಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಸದರೀ ವಿದ್ಯಾರ್ಥಿನಿಲಯಗಳಲ್ಲಿದ್ದ ೧೯೪೪-೪೫ ರಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಮತ್ತು ಆಪರಿಗಾಗಿ ತಲಾ ಒಂದು ವರ್ಷಕ್ಕೆ ಎಷ್ಟು ಹಣ ವಿಚ್ಚು ಮಾಡಲಾಗುತ್ತದೆ ?

ಇ) ಶಹಬಾದ್ ಕ್ಷೇತ್ರದಲ್ಲಿ ಯಾವ ಯಾವ ಕಡೆಗಳಲ್ಲಿ ಈ ಸೌಕರ್ಯವಿದೆ ಮತ್ತು ಸದರಿ ವಿದ್ಯಾರ್ಥಿನಿಲಯಗಳು ತಮ್ಮದೇ ಆದ ಕಟ್ಟಡಗಳನ್ನು ಹೊಂದಿವೆಯೆ ?

ಈ) ಪ್ರಸಕ್ತ ಸಾಲಿನಲ್ಲಿ ಈ ಕ್ಷೇತ್ರದಲ್ಲಿ ಎಷ್ಟು ವಿದ್ಯಾರ್ಥಿನಿಲಯಗಳನ್ನು ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು ?

ಉ) ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡಲು ಪಾಲಿಸಬೇಕಾದ ಷರತ್ತುಗಳಾವುವು ?

ಶ್ರೀ ವಿ. ಎಲ್. ಪಾಟೀಲ್.--(ಸಮಾಜ ಕಲ್ಯಾಣ ಸಚಿವರು.)

ಅ) ೧೨೭

ಆ) ೭೭೧೯

ಕಾಲೇಜು ವಿದ್ಯಾರ್ಥಿಗಳಿಗೆ ರೂ. ೧, ೨೫೦ ರಿಂದ ೧, ೪೦೦-೧೦ ತಿಂಗಳಿಗೆ
(ಇತರೆ ವೆಚ್ಚಗಳ ಹೊರತು ಪಡಿಸಿ)

ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ. ರೂ. ೧, ೨೦೦ ರಿಂದ ೧, ೨೯೫-೧೦ ತಿಂಗಳಿಗೆ
(ಇತರೆ ವೆಚ್ಚಗಳ ಹೊರತು ಪಡಿಸಿ)

ಇ) ಶಹಬಾದ್ ವಿಧಾನ ಸಭಾ ಕ್ಷೇತ್ರ

೧)	ಶಹಬಾದ್	ಸರ್ಕಾರಿ ಕಟ್ಟಡ
೨)	ಹೆಬ್ಬಾಲ	ಬಾಡಿಗೆ ಕಟ್ಟಡ
೩)	ವಾಡಿಜಕ್ಷನ್	—" " —
೪)	ಗುಲ್ಬರ್ಗಾ	—" " —
೫)	ಸಾವಲಗಿ	—" " —
೬)	ಮಹಾಗ್ರ್	—" " —
೭)	ಹರಕೂರು	—" " —
೮)	ಭೀಮನ ಹಳ್ಳಿ	—" " —
೯)	ಸೂರತ್	—" " —

ಈ) ೧೯೮೫-೮೬ನೇ ಸಾಲಿನಲ್ಲಿ ಹೊಸ ವಿದ್ಯಾರ್ಥಿನಿಲಯಗಳ ಪ್ರಾರಂಭಕ್ಕೆ ಆಯವ್ಯಯ ಅನುಕೂಲ ಇರುವುದಿಲ್ಲ.

ಉ) ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಕನಿಷ್ಟ ಪಕ್ಷ ೨೫ ರಿಂದ ೫೦ ವಿದ್ಯಾರ್ಥಿಗಳ ಸಿಗಬೇಕು. ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಶಿಫಾರಸ್ ಇರಬೇಕು. ಆ ಸ್ಥಳದಲ್ಲಿ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿರಬೇಕು. ಸೂಕ್ತ ಸರ್ಕಾರಿ ಆಥವಾ ಬಾಡಿಗೆಗೆ ಕಟ್ಟಡ ದೊರೆಯಬೇಕು ಮತ್ತು ೫ ಕಿ. ಮೀ. ದೂರದಿಂದ ಬರುವ ವಿದ್ಯಾರ್ಥಿಗಳು ಸಾಕಷ್ಟು ದೊರೆಯಬೇಕು.

ಶ್ರೀ ಕೆ.ಬಿ. ಶಾಣಪ್ಪ —ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಒಬ್ಬ ವಿದ್ಯಾರ್ಥಿಗೆ ೧೨೦ ರೂಪಾಯಿಯಿಂದ ೧೨೫ ರೂಪಾಯಿಗಳವರೆಗೆ ವಿದ್ಯಾರ್ಥಿವೇತನವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಕೊಡತಕ್ಕ ವಿದ್ಯಾರ್ಥಿವೇತನ ಬಹಳ ಕಡಿಮೆ ಇದೆ. ಕೊಡತಕ್ಕ ವಿದ್ಯಾರ್ಥಿವೇತನವನ್ನು ೨೦೦ ರೂಗಳಿಂದ ೨೫೦ ರೂಗಳವರೆಗೆ ಏರಿಸತಕ್ಕ ಯೋಚನೆಯನ್ನು ಏನಾದರೂ ಸರ್ಕಾರ ಮಾಡಿದೆಯೇ ? ಶಹಬಾದ್ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಹಾಸ್ಟಲ್‌ಗಳಿವೆ ಸರ್ಕಾರಿ ಕಟ್ಟಡಗಳು ಎಷ್ಟಿವೆ ಎಂದು ಕೇಳಿದ್ದೇನೆ. ದುರ್ದೈವ ನನಗೆ ಸರಿಯಾದ ಉತ್ತರ ಬಂದಿರುವುದಿಲ್ಲ. ಶಹಬಾದ್ ವಿಧಾನಸಭಾ ಕ್ಷೇತ್ರದ ಹಾಸ್ಟೆಲ್‌ಗಳ ಸಂಖ್ಯೆಯನ್ನು ಕೇಳಿದರೆ ಗುಲ್ಬರ್ಗಾ ಜಿಲ್ಲೆಯ ಮಾಹಿತಿಯನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಇರತಕ್ಕದ್ದು ಶಹಬಾದ್ ಮತ ಕ್ಷೇತ್ರದಲ್ಲಿ ಎಷ್ಟು ಹಾಸ್ಟಲ್‌ಗಳಿವೆ ಎಂದು ಕೇಳಿದ್ದೇನೆ, ಶಹಬಾದ್ ಮತ್ತು ವಾಡಿಬಿಟ್ಟರೆ ಬೇರೆ ಕಡೆ ಹಾಸ್ಟಲ್‌ಗಳು ಇಲ್ಲ.

ಶ್ರೀ ವಿ. ಎಲ್. ಪಾಟೀಲ್.— ಶಹಬಾದ್ ಮತಕ್ಷೇತ್ರದಲ್ಲಿ ಎಷ್ಟು ಹಾಸ್ಟಲ್‌ಗಳಿವೆ ಮತ್ತು ಅಲ್ಲಿ ಕಟ್ಟಡ ಎಷ್ಟು ಇವೆಯೆಂದು ಕೇಳಿದ್ದಾರೆ. ಅದಕ್ಕೆ ಉತ್ತರವಾಗಿ ಒಂದು ಸರ್ಕಾರಿ ಕಟ್ಟಡ ಇದೆಯೆಂದು ಹೇಳಿದ್ದೇನೆ. ಜೊತೆಗೆ ಗುಲ್ಬರ್ಗ ಜಿಲ್ಲೆಯಲ್ಲಿ ನಡೆಸಲಾಗುತ್ತಿರುವ ವಿದ್ಯಾರ್ಥಿನಿಲಯಗಳ ಒಟ್ಟು ಸಂಖ್ಯೆ ಎಷ್ಟು ಎಂದು ಕೇಳಿದ್ದರಿಂದ ಉತ್ತರ ಹೇಳಿದ್ದೇನೆ.

ಅಧ್ಯಕ್ಷರು.— ತಮ್ಮ ಹತ್ತಿರ ಮಾಹಿತಿ ಇಲ್ಲದಿದ್ದರೆ ತರಿಸಿಕೊಡಿ.

ಶ್ರೀ ವಿ. ಎಲ್. ಪಾಟೀಲ್.— ಶಹಬಾದ್‌ನಲ್ಲಿ ಒಂದು ಸರ್ಕಾರಿ ಕಟ್ಟಡ ಇದೆಯೆಂದು ಹೇಳಿದ್ದೇನೆ. ಇದು ಸರಿಯಿಲ್ಲದಿದ್ದರೆ ಬೇರೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.— ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳಿದ್ದು...

ಅಧ್ಯಕ್ಷರು.— ಮಂತ್ರಿಗಳು ಬೇರೆ ಉತ್ತರ ತರಿಸಿಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಧರ್ಮಸಿಂಗ್.— ಪ್ರಶ್ನೆಗೆ ಉತ್ತರ ಸರಿಯಾಗಿ ಬರದಿದ್ದರೆ ಪ್ರಶ್ನೆಯನ್ನು ತಡೆಹಿಡಿದು ಮತ್ತೊಮ್ಮೆ ಉತ್ತರ ಕೊಡಿಸಲಿಕ್ಕೆ ಅವಕಾಶ ಮಾಡಿಕೊಡಿ.

SRI. K. B. SHANAPPA.— I am not going to accept the answer.

ಶ್ರೀ ವಿ. ಎಲ್. ಪಾಟೀಲ್.— ಶಹಾಬಾದ್ ಕ್ಷೇತ್ರದಲ್ಲಿರತಕ್ಕ ವಿದ್ಯಾರ್ಥಿನಿಲಯಗಳ ಹೆಸರುಗಳನ್ನು ಕೊಟ್ಟಿದ್ದೇನೆ. ಶಹಾಬಾದ್ ಕ್ಷೇತ್ರದಲ್ಲಿ ಸರ್ಕಾರಿ ಕಟ್ಟಡ ಇರತಕ್ಕಂತಹ ಒಂದು ವಿದ್ಯಾರ್ಥಿನಿಲಯ ಮಾತ್ರವಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯಮಂತ್ರಿಯವರಿಗೆ ಸರಿಯಾದ ಉತ್ತರ ಸಿಗದಿದ್ದರೆ, ದಯವಿಟ್ಟು ಪ್ರಶ್ನೆಯನ್ನು ತಡೆಹಿಡಿಯಿರಿ.

ಶ್ರೀ ಕೆ. ಬಿ. ಶಾಣಪ್ಪ.— ಸ್ವಾಮಿ, ಮಾನ್ಯಮಂತ್ರಿಯವರು ಕೊಟ್ಟಿರತಕ್ಕಂತಹ ಉತ್ತರದಲ್ಲಿ ೯ ವಿದ್ಯಾರ್ಥಿನಿಲಯಗಳೂ ಕೂಡ, ನನ್ನ ಕ್ಷೇತ್ರದಲ್ಲಿ ಬರುವುದಿಲ್ಲ.

ಶ್ರೀ ಧರ್ಮಸಿಂಗ್,— ತಾಲ್ಲೂಕುವಾರು ವಿವರಗಳನ್ನು ಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೊಟ್ಟಿರತಕ್ಕಂತಹ ಪ್ರಶ್ನೆಗಳು ಈ ರೀತಿ ಇವೆ.

ಎ) ಗುಲ್ಬರ್ಗಾ ಜಿಲ್ಲೆಯಲ್ಲಿ ನಡೆಸಲಾಗುತ್ತಿರುವ ವಿದ್ಯಾರ್ಥಿನಿಲಯಗಳ ಒಟ್ಟು ಸಂಖ್ಯೆ ಎಷ್ಟು ?

ಬಿ) ಸದರಿ ವಿದ್ಯಾರ್ಥಿನಿಲಯಗಳಲ್ಲಿದ್ದ ೧೯೮೪-೮೫ರ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; ವರ್ಷಕ್ಕೆ ಅವರಿಗಾಗಿ ತಲಾ ಒಂದು ವರ್ಷಕ್ಕೆ ಎಷ್ಟು ಹಣವನ್ನು ವಿನಿಯೋಗ ಮಾಡಲಾಗುತ್ತದೆ ?

ಸಿ) ಶಹಬಾದ್ ಕ್ಷೇತ್ರದಲ್ಲಿ ಯಾವ ಯಾವ ಕಡೆಗಳಲ್ಲಿ ಈ ಸಂಸ್ಥೆಗಳಿವೆ ಮತ್ತು ಸದರಿ ವಿದ್ಯಾರ್ಥಿನಿಲಯಗಳು ತಮ್ಮದೇ ಆದ ಕಟ್ಟಡಗಳನ್ನು ಹೊಂದಿವೆಯೇ ? ಇದಕ್ಕೆ ಉತ್ತರವಾಗಿ ಶಹಾಬಾದ್‌ನಲ್ಲಿರತಕ್ಕಂತಹ ವಿದ್ಯಾರ್ಥಿನಿಲಯಕ್ಕೆ ಸ್ವಂತ ಕಟ್ಟಡವಿದೆಯೆಂದು ಹೇಳಿದ್ದಾರೆ.

ಶ್ರೀ ಕೆ. ಬಿ. ಶಾಣಪ್ಪ.— ಮಾನ್ಯ ಸಭಾಧ್ಯಕ್ಷರೆ, ಶ್ರೀ ಲಕ್ಷ್ಮೀಸಾಗರ್‌ರವರು ಹೇಳಿದ ಉತ್ತರವನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ವಿದ್ಯಾರ್ಥಿನಿಲಯಗಳ ಹೆಸರುಗಳನ್ನು ಏನು ಹೇಳಿದ್ದಾರೆ, ಅದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದಲ್ಲ. ನಾನು ಗುಲ್ಬರ್ಗಾದ್ದು ಕೇಳಿಲ್ಲ.

ಶ್ರೀ ವಿ. ಎಲ್. ಪಾಟೀಲ್.— ನಾನು ಗುಲ್ಬರ್ಗಾದ್ದು ಮತ್ತು ಶಹಾಬಾದ್ದು ಎರಡೂ ಕೊಟ್ಟಿದ್ದೇನೆ. ತಮಗೆ ಬೇಕಾದ್ದನ್ನು ನೋಡಿಕೊಳ್ಳಬಹುದು.

ಹೊಸದುರ್ಗ ತಾಲ್ಲೂಕಿನ ಅರಣ್ಯಭೂಮಿಯಲ್ಲಿ ಒತ್ತುವರಿ ಮಾಡುತ್ತಿರುವ ಜಮೀನಿನಲ್ಲಿ ಅರಣ್ಯ ಬೆಳೆಸುವುದು.

೩೬೮. ಶ್ರೀ ಜಿ. ರಾಮದಾಸ್ (ಹೊಸದುರ್ಗ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಅರಣ್ಯ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಎ) ಹೊಸದುರ್ಗ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯ ಜಮೀನುಗಳನ್ನು ರೈತರು ಒತ್ತುವರಿ ಮಾಡಿದ್ದಾರೆಯೇ ?

ಬಿ) ಇಂತಹ ಜಮೀನುಗಳಲ್ಲಿ ಅರಣ್ಯ ಬೆಳೆಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಸಿ) ಹಾಗಿದ್ದಲ್ಲಿ ಎಷ್ಟು ಲಕ್ಷ ಸಸಿಗಳನ್ನು ನೆಡಲು ಕ್ರಮ ಕೈಗೊಳ್ಳಲಾಗಿದೆ ?

ಡಿ) ೧೯೮೪-೮೫ರಲ್ಲಿ ಎಷ್ಟು ಸಸಿ ನೆಡಲಾಯಿತು ಮತ್ತು ಇದಕ್ಕಾಗಿ ವೆಚ್ಚ ಮಾಡಿದ ಹಣ ವೆಷ್ಟು ?

ಇ) ಹೊಸದಾಗಿ ನೆಡಲಾದ ಸಸಿಗಳಿಗೆ ಬಲವಾದ ಬೇಲಿ ಹಾಕಿಸುವ ಉದ್ದೇಶ ಇದೆಯೇ ?

ಶ್ರೀ ಬಿ. ಎ. ಜೀ. ವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಎ) ಹೊಸದುರ್ಗ ತಾಲ್ಲೂಕಿನಲ್ಲಿ ಸುಮಾರು ೫೪ ಹೆಕ್ಟೇರು ಅರಣ್ಯ ಪ್ರದೇಶಗಳಲ್ಲಿ ರೈತರು ಒತ್ತುವರಿ ಮಾಡಿರುತ್ತಾರೆ.

ಬಿ) ಅರಣ್ಯದ ರಕ್ಷಣೆಯ ದೃಷ್ಟಿಯಿಂದ ರೈತರಿಂದ ಒತ್ತುವರಿಯಾದ ಜಾಗದಲ್ಲಿ ಅರಣ್ಯ ಬೆಳೆಸಲು ಕ್ರಮ ಕೈಗೊಳ್ಳಲಾಗಿದೆ.

ಸಿ) ಸುಮಾರು ೫೦,೦೦೦ ವಿವಿಧ ಜಾತಿಯ ಸಸಿಗಳನ್ನು ಇದುವರೆಗೂ ಒತ್ತುವರಿಯಾದ ಜಾಗದಲ್ಲಿ ನೆಡಲಾಗಿದೆ.

ಡಿ) ೧೯೮೪-೮೫ರಲ್ಲಿ ಸುಮಾರು ೭ ಹೆಕ್ಟೇರು ಒತ್ತುವರಿ ಪ್ರದೇಶದಲ್ಲಿ ೧೪,೦೦೦ ಸಸಿಗಳನ್ನು ನೆಡಲಾಗಿದೆ. ಇದಕ್ಕೆ ೫೧,೦೦೦ ರೂಪಾಯಿಗಳು ಖರ್ಚಾಗಿದೆ.

ಇ) ಸಾಧ್ಯವಾದ ಕಡೆಗಳಲ್ಲಿ ಬೇಲಿಯನ್ನು ಹಾಕಲಾಗಿದೆ. ಉಳಿದ ಕಡೆಗಳಲ್ಲಿ ಜಾನುವಾರು, ಬರದ ಹಾಗೆ ಆಳವಾದ ಅಗಳುಗಳನ್ನು ತೆಗೆಯಲಾಗಿದೆ.

ಶ್ರೀ ಜಿ. ರಾಮದಾಸ್.—ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಈಗ ಮಾನ್ಯ ಸಚಿವರು ಅಪ್ಪಣೆ ಕೊಡಿಸಿದ ಹಾಗೆ, ಅನೇಕ ಭೂರಹಿತ ವರ್ಗದವರು ಹತ್ತಾರು ವರ್ಷಗಳಿಂದ ಜಮೀನನ್ನು ಹಂಗಾವಿನ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅದನ್ನು ಖಾಯಂ ಮಾಡಿ, ಅವರಿಗೆ ಸಾಗುವಳಿ ಚೀಟಿಯನ್ನು ಆದಷ್ಟು ಬೇಗ ಮಂಜೂರು ಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.